**ಉಪನಿರ್ದೇಶಕರು(ಖಾ.ಗ್ರಾ)ರವರ ಕಾರ್ಯಾಲಯ, ಗ್ರಾಮೀಣ ಕೈಗಾರಿಕೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು.**

**(೪)(೧)(ಬ)[1] ಉಪನಿರ್ದೇಶಕರು (ಖಾಗ್ರಾ) ರವರ ಕಚೇರಿಯ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು**

ಉಪನಿರ್ದೇಶಕರು (ಖಾಗ್ರಾ) ರವರ ಕಚೇರಿಯಲ್ಲಿ , ಓರ್ವ ಪ್ರಥಮ ದರ್ಜೆ ಸಹಾಯಕರು, ಕೇಂದ್ರ ಸ್ಥಾನದ ತಾಲ್ಲೂಕಿನ ಒರ್ವ ಕೈಗಾರಿಕಾ ವಿಸ್ತರಣಾದಿಕಾರಿ ಕರ್ತವ್ಯ ನಿರ್ವಹಿಸುತ್ತಾರೆ. ತಾಲ್ಲೂಕು ಮಟ್ಟದಲ್ಲಿ, ಕೈಗಾರಿಕಾ ವಿಸ್ತರಣಾದಿಕಾರಿಗಳು ಕರ್ತವ್ಯ ನಿರ್ವಹಿಸುತ್ತಾರೆ. ಉಪನಿರ್ದೇಶಕರು ಕಚೇರಿಯ ಮುಖ್ಯಸ್ಥರಾಗಿರುತ್ತಾರೆ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶನಾಲಯದಿಂದ ನೀಡುವ ಮಾರ್ಗಸೂಚಿಯನ್ನು ಆಧರಿಸಿ , ಕ್ರಿಯಾಯೋಜನೆಯನ್ನು ಸಿದ್ಧಪದಿಸಿ ಜಿಲ್ಲಾ ಪಂಚಾಯತಿಗೆ ಸಲ್ಲಿಸಿ ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಪಡೆದು, ಅನುಮೋದಿತ ಕ್ರಿಯಾಯೋಜನೆಯನ್ವಯ ವಿವಿದ ಯೋಜನೆಗಳನ್ನು /ಕಾರ್ಯಕ್ರಮಗಳನ್ನು ಅನುಸ್ಟಾನಗೊಳಸಲಾಗುತ್ತದೆ.

4(1)(ಬಿ)(2 ) **ಉಪನಿರ್ದೇಶಕರು (ಖಾಗ್ರಾ) ರವರ ಕಚೇರಿಯ ಅದಿಕಾರಿಗಳ ಮತ್ತು ನೌಕರರ ಕರ್ತವ್ಯಗಳು**

**ಉಪನಿರ್ದೇಶಕರ ಕರ್ತವ್ಯಗಳು**

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶನಾಲಯದ ಮಾರ್ಗಸೂಚಿ ಮತ್ತು ಸೂಚನೆಯನುಸಾರ ಜಿಲ್ಲಾ ಮಟ್ಟದಲ್ಲಿ ಜಿಲ್ಲಾವಲಯ ಯೊಜನೆಯಡಿ ಈ ಕೆಳಗಂಡ ಕಾರ್ಯಕ್ರಮಗಳ ಕ್ರಿಯಾಯೊಜನೆಯನ್ನು ತಯಾರಿಸಿ ಜಿಲ್ಲಾಪಂಚಾಯತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಅನುಸ್ಟಾನಗೊಳಸುವುದು

1. ಯೋಜನೆ ಅನುಸ್ಟಾನಗೊಳಸುವ ಕಾರ್ಯಕ್ರಮ

1. ಜಿಲ್ಲಾ ಉದ್ಯಮ ಕೇಂದ್ರ-----(೧)ಕೌಶಲ್ಯಾಬಿವೃದ್ಧಿ ಮತ್ತು ಕುಶಲಕರ್ಮಿಗಳ ಸಮೂಹ ಅಬಿವೃದ್ಧಿಗೆ ತರಬೇತಿ ಕಾರ್ಯಕ್ರಮ, ತರಬೇತಿ ಪಡೆದ ಅಭ್ಯರ್ಥಿಗಳಗೆ ಸುದಾರಿತ ಉಪಕರಣ ನೀಡಿಕೆ
(೨) ಕುಶಲಕರ್ಮಿಗಳಗೆ ಸಹಾಯದನದೊಂದಿಗೆ ವಸತಿ ಕಾರ್ಯಗಾರ ನೀಡುವುದು

(೧)ವಿಚಾರಘೋಷ್ಠಿ/ಕ್ಷೇತ್ರೋತ್ಸವಗಳು (೧) ಹೋಬಳ ಮಟ್ಟದ ಪ್ರಚಾರ ಸಬೆ ನಡೆಸುವುದು
(೨)ತಾಲ್ಲೂಕು ಮಟ್ಟದ ಜಾಗೃತಿ ಶಿಬಿರ ನಡೆಸುವುದು
(೩)ವಸ್ತು ಪ್ರದರ್ಶನ ಏರ್ಪಡಿಸುವುದು

(೩)ಕುಶಲಕರ್ಮಿಗಳಗೆ ಬಡ್ಡಿಸಹಾಯಧನ—ಅತಿ ಸಣ್ಣ ಕೈಗಾರಿಕೆಗಳು ಸೇರಿದಂತೆ ಕುಶಲಕರ್ಮಿಗಳಗೆ ಬಡ್ಡಿ ಸಹಾಯದನ ನೀಡುವುದು-

(೪) ವೃತ್ತಿಪರ ಕುಶಲಕರ್ಮಿಗಳಗೆ ಉಚಿತ ಸುಧಾರಿತ ಉಪಕರಣಗಳನ್ನು ಸರಭರಾಜು ಮಾಡುವುದು

---

(೨)ಗ್ರಾಮೀಣ ಕಸುಬುದಾರರಿಗೆ ತರಬೇತಿಯನ್ನು ನೀಡಲು ಕ್ರಮವಹಿಸುವುದು
(೩) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಸುಬುದಾರರಿಗೆ ಉಚಿತ ಸುಧಾರಿತ ಉಪಕರಣಗಳನ್ನು ಸರಭರಾಜು ಮಾಡುವುದು
(೪)ಉದ್ದಿಮೆ ಸ್ಥಾಪನೆ ಮತ್ತು ಬೆಳವಣಿಗೆಗೆ ಪ್ರಚಾರ ಘೋಷ್ಟಿಗಳು , ವಿಚಾರ ಸಂಕಿರಣ, ವಸ್ತು ಪ್ರದರ್ಶನ , ಉದ್ಯಮಶೀಲತಾ ಅಬಿವೃದ್ಧಿ ತರಬೇತಿ ಕಾರ್ಯಕ್ರಮ ಹಾಗೂಕಾರ್ಯಾಗಾರಗಳನ್ನು ಎರ್ಪಡಿಸಿ ಕುಶಲಕರ್ಮಿಗಳಗೆ/ಗುಡಿ ಕೈಗಾರಿಕೆಗಳವರಿಗೆ/ ಕರಕುಶಲ ವೃತ್ತಿಯವರಿಗೆ ಅರಿವು

ಮೂಡಿಸುವುದು.
(೫)ತಾಲ್ಲೂಕು ಕೈಗಾರಿಕಾ ವಿಸ್ತರಣಾದಿಕಾರಿಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆ, ತಾತ್ಕಾಲಿಕ ಪ್ರವಾಸ ಪಟ್ಟಿ/ದಿನಚರಿಗಳ ಅನುಮೋದನೆ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳ ಮೇಲುಸಹಿ ಮಾಡುವುದು
(೬)ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಯಲ್ಲಿ ಜರುಗುವ ಮಾಸಿಕ ಕೆ.ಡಿ.ಪಿ. ಸಬೆ, ಕೆ.ಡಿ.ಪಿ. ತ್ರೈಮಾಸಿಕ ಸಭೆ, ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆ, ಯೋಜನೆ ಮತ್ತು ಹಣಕಾಸು ಸಮಿತಿ ಸಬೆ ಹಾಗೂ ಸಾಮಾನ್ಯ ಸ್ಥಾಯಿ ಸಮಿತಿ ಸಭೆ,ಗಳಿಗೆ ಹಾಜರಾಗುವುದು
(೭) ಮಾಹೆಯಾನ ಸಿಬ್ಬಂದಿ ಸಭೆ ನಡೆಸುವುದು, ಕಚೇರಿಯ ಕಾಗದ ಪತ್ರಗಳು ಸಕಾಲದಲ್ಲಿ ವಿಲೇಯಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು ಮತ್ತು ಸಿಬ್ಬಂದಿಗೆ ಸೂಕ್ತ ಸಲಹೆ , ಸೂಚನೆ ಮತ್ತು ಮಾರ್ಗದರ್ಶನ ನೀಡುವುದು
(೮) ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ ಮತ್ತು ಮುಖ್ಯ ಕಾರ್ಯ ನಿರ್ವಹಣಾದಿಕಾರಿ ,ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು ಇವರು ಸೂಚಿಸುವ ಇತರೆ ಯಾವುದೆ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು

**ಪ್ರಥಮ ದರ್ಜೆ ಸಹಾಯಕರ ಕರ್ತವ್ಯಗಳು**

ಉಪನಿರ್ದೇಶಕರು (ಖಾಗ್ರಾ) ರವರ ಕಚೇರಿಯಲ್ಲಿ ಲಿಪಿಕ ನೌಕರರಾಗಿ ಓರ್ವ ಪ್ರಥಮ ದರ್ಜೆ ಸಹಾಯಕರಿದ್ದು ಅವರು ಈ ಕೆಳಗಂಡ ಕರ್ತವ್ಯಗಳನ್ನು ನಿರ್ವಹಿಸುವರು

(೧) ಸೇವಾ ಪುಸ್ತಕಗಳ ನಿರ್ವಹಣೆ, ವೈಯಕ್ತಿಕ ಕಡತಗಳ ನಿರ್ವಹಣೆ, ನೌಕರರ ಚರಾಸ್ತಿ/ ಸ್ಥಿರಾಸ್ತಿ ಪಟ್ಟಿ ನಿರ್ವಹಣೆ
(೨) ಕಚೇರಿಯ ಅದಿಕಾರಿ/ನೌಕರರಿಗೆ ವೇತನ /ಪ್ರವಾಸಭತ್ಯೆಗಳ ಪಾವತಿ ಮತ್ತು ಸಿಬ್ಬಂದಿ ವರ್ಗದವರಿಗೆ ನಿಯಮಾನುಸಾರ ಮುಂಗಡಗಳ ಮಂಜೂರಾತಿ ಮತು ಮುಂಗಡಗಳ ವಸೂಲಾತಿ ವಹಿಗಳ ನಿರ್ವಹಣೆ
(೩) ಲೇಖನ ಸಾಮಗ್ರಿ ಖರೀದಿ, ದೂರವಾಣಿ ಬಿಲ್ಲು ಸಿದ್ದಪಡಿಸುವುದು, ಇಂದನ ಖರೀದಿ, ವಾಹನ ದುರಸ್ತಿಯ ವೆಚ್ಚ ಪಾವತಿಸುವಿಕೆ
(೪) ಸಾಮಾನ್ಯ ಸ್ವೀಕೃತಿ ವಹಿ, ರವಾನೆ ವಹಿ,ಅಂಚೇ ಚೀಟಿ ವಹಿ, ಹಾಜರಿವಹಿ, ಮುದ್ದಾಂ ಪುಸ್ತಕ ನಿರ್ವಹಣೆ ಮತ್ತು ನಿಯತಕಾಲಿಕ ವಹಿ ನಿರ್ವಹಣೆ
(೫) ಸಾಂದರ್ಭಿಕ ರಜಾ ವಹಿ, ನಗದು ಪುಸ್ತಕ ನಿರ್ವಹಣೆ, ಸಾದಿಲ್ವಾರುಬಿಲ್ಲು ವಹಿ, ದೂರವಾಣಿ ವಹಿ , ದಿನಪತ್ರಿಕೆಗಳ ವಹಿ,ಚಲನವಲನವಹಿ, ವಿಷಯವಹಿ,
(೬) ಪೀಠೋಪಕರಣ ಮತ್ತು ದಾಸ್ತಾನುಗಳ ನಿರ್ವಹಣೆ
(೭) ಲೆಕ್ಕ ಪರಿಶೋದನಾ ಕಡತಗಳ ನಿರ್ವಹಣೆ,ಯೋಜನಾ ವೆಚ್ಚಗಳ ನಿರ್ವಹಣೆ ಮತ್ತು ಅನುದಾನ ಕಡತ ನಿರ್ವಹಣೆ,
(೮) ಮಾಹಿತಿ ಹಕ್ಕು ಅದಿನಿಯಮದ ಅರ್ಜಿಗಳ ಕಡತ ನಿರ್ವಹಣೆ
(೯) ಕುಶಲಕರ್ಮಿ ತರಬೇತಿ ಸಂಸ್ಥೆ ಚಿಕ್ಕಮಗಳೂರು , ಇಲ್ಲಿಗೆ ಸಂಬಂದಿಸಿದಂತೆ ಬರುವ ವಿಷಯಗಳ ಕಡತ ನಿರ್ವಹಣೆ
(೧೦) ಮಾಹೆಯಾನ ಕನ್ನಡ ಪ್ರಗತಿ ಕಡತ ನಿರ್ವಹಣೆ
(೧೧) ಸುತ್ತೋಲೆ ಮತ್ತು ಸರ್ಕಾರಿ ಆದೇಶಗಳ ಕಡತ ನಿರ್ವಹಣೆ
(೧೨) ಕರ್ನಾಟಕ ಪಾರದರ್ಶಕ ನಿಯಮ ಪಾಲನೆಗೆ ಸಂಬಂದಿಸಿ ಕಡತ ನಿರ್ವಹಣೆ
(೧೩) ಜೇನುಕೃಷಿಗೆ ಸಂಬಂದಿಸಿದ ಕಡತಗಳ ನಿರ್ವಹಣೆ
(೧೪) ಉಪನಿರ್ದೇಶಕರು ಸೂಚಿಸುವ ಇತರೆ ಕೆಲಸ ನಿರ್ವಹಿಸುವುದು

ತಾಲ್ಲೂಕ ಕೈಗಾರಿಕಾ ವಿಸ್ತರಣಾಧಿಕಾರಿಗಳು ನಿರ್ವಹಿಸುವ ಕರ್ತವ್ಯಗಳು

(!) ಜಿಲ್ಲಾ ವಲಯ ಯೋಜನೆಯಡಿಯಲ್ಲಿ ಅನುಸ್ಠಾನಗೊಳಸುವ ಜಿಲ್ಲಾ ಉದ್ಯಮ ಕೇಂದ್ರದ ಕಾರ್ಯಕ್ರಮಗಳು, ವಿಚಾರಘೋಷ್ಠಿ/ಕ್ಷೇತ್ರೋತ್ಸವಗಳು ,ಕುಶಲಕರ್ಮಿಗಳಿಗೆ ಬಡ್ಡಿಸಹಾಯಧನ ನೀಡಿಕೆ ಮತ್ತು ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣಗಳನ್ನು ಸರಭರಾಜು ಮಾಡುವುದು , ಈ ಯೋಜನೆಗಳ ಅನುಸ್ಠಾನಗೊಳಸುವ ಸಂಬಂದ, ಆಯಾ ತಾಲ್ಲೂಕಿಗೆ ನಿಗದಿಪಡಿಸಿರುವ ಗುರಿಯನುಸಾರ, ಅರ್ಹ ಪಲಾನುಬವಿಗಳನ್ನು ಗುರ್ತಿಸಿ,ಕಾರ್ಯಕ್ರಮಗಳನ್ನು ಯಶಶ್ವಿಯಾಗಿ ಅನುಸ್ಟಾನಗೊಳಸಲು ಉಪನಿರ್ದೇಶಕರಿಗೆ ನೆರವಾಗುವುದು
(೨)ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಉಚಿತ ಸುದಾರಿತ ಉಪಕರಣ ಸರಭರಾಜಿಗೆ, ಅರ್ಹ ಪಲಾನುಭವಿಗಳನ್ನು ಗುರ್ತಿಸಿ, ತಾಲ್ಲೂಕು ಪಂಚಾಯತಿಯಿಂದ ಅನುಮೋದನೆ ಪಡೆದು ಕಾರ್ಯಗತಗೊಳಸುವುದು
(೩)ಗ್ರಾಮೀಣ ಕುಶಲಕರ್ಮಿಗಳನ್ನು ಗುರ್ತಿಸುವುದು ಹಾಗೂ ಸಮೀಕ್ಷೆ ನಡೆಸುವುದು
(೪) ಕುಶಲಕರ್ಮಿಗಳಿಗೆ, ಉದ್ದಿಮೆದಾರರಿಗೆ ಸೂಕ್ತವಾದ ಯೋಜನೆಗಳನ್ನು ಆಯ್ಕೆ ಮಾಡುವಲ್ಲಿ, ಯೋಜನಾವರದಿ ತಯಾರಿಸುವಲ್ಲಿ , ಭ್ಯಾಂಕುಗಳಿಗೆ,ಯೋಜನೆಯ ಶಕ್ಯತೆಯ ಬಗ್ಗೆ ಪರಿವೀಕ್ಷಣಾ ವರದಿ ನೀಡುವಲ್ಲಿ ಮತ್ತು ಉದ್ಯಮಿಗಳಿಗೆ,

ಬ್ಯಾಂಕುಗಳಿಂದ, ಹಣಕಾಸು ಸಂಸ್ಥೆಗಳಿಂದ ಮತ್ತು ನಭಾರ್ಡ ವತಿಯಿಂದ ಕುಶಲಕರ್ಮಿಗಳಿಗೆ, ಮತ್ತು ಕೈಗಾರಿಕಾ ಘಟಕಗಳನ್ನು ಸ್ಥಾಪಿಸಬಯಸುವವರಿಗೆ ಲಭ್ಯವಿರುವ ಸಾಲ ಸೌಲಭ್ಯದಬಗ್ಗೆ ಮಾರ್ಗದರ್ಶನ ನೀಡುವುದು ಮತ್ತು ಅವುಗಳನ್ನು ದೊರಕಿಸಿಕೊಡುವಲ್ಲಿ ನೆರವಾಗುವುದು

(೫)ರಾಜ್ಯ ವಲಯ ಯೋಜನೆಯಡಿ , ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಅನುಸ್ಟಾನಗೊಳಸುವ ವಿಷೇಶ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ವಸತಿ ಕಾರ್ಯಾಗಾರ ಮತ್ತು ಸುದಾರಿತ ಉಪಕರಣ ನೀಡಿಕೆಗೆ, ಸೂಕ್ತ ಪಲಾನುಬವಿಗಳನ್ನು ಗುರ್ತಿಸುವುದು

(೬) ಉದ್ಯಮಗಳನ್ನು ಸ್ಥಾಪಿಸಬಯಸುವ ಉದ್ಯಮಶೀಲರಿಗೆ ಜಿಲ್ಲಾಕೈಗಾರಿಕಾ ಕೇಂದ್ರದಿಂದ ಉದ್ಯಮಶೀಲತಾ ಪ್ರಮಾಣ ಪತ್ರ ಭಾಗ -೧ ಮತ್ತು ಉದ್ಯಮಗಳನ್ನು ಸ್ಥಾಪಿಸಿದವರಿಗೆ ಉದ್ಯಮಶೀಲತಾ ಪ್ರಮಾಣ ಪತ್ರ ಭಾಗ-೨ ದೊರಕಿಸಿಕೊಡುವಲ್ಲಿ ನೆರವಾಗುವುದು ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಲಭ್ಯವಿರುವ ಉತ್ತೇಜನ ಮತ್ತು ರಿಯಾಯಿತಿಗಳ ಬಗ್ಗೆ ಉದ್ಯಮಶೀಲರಿಗೆ ಮಾರ್ಗದರ್ಶನ ನೀಡುವುದು ಮತ್ತು ಅವುಗಳನ್ನು ದೊರಕಿಸಿಕೊಡುವಲ್ಲಿ ನೆರವಾಗುವುದು.

(೭) ಪ್ರಧಾನ ಮಂತ್ರಿಗಳ ರೊಜಗಾರ್ ಯೊಜನೆ ಮತ್ತು ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ ಕಾರ್ಯಕ್ರಮದಡಿ ಸಾಲಪಡೆದವರಿಂದ ಸಾಲ ವಸೂಲಾತಿಗೆ ನೆರವಾಗುವುದು

(೮) ರೋಗಗ್ರಸ್ತ ಕೈಗಾರಿಕಾ ಘಟಕಗಳನ್ನು ಗುರ್ತಿಸುವುದು ಮತ್ತು ಅವುಗಳ ಪುನಶ್ಚೇತನಕ್ಕೆ ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಪ್ರಸ್ತಾವ ನೆ ಸಲ್ಲಿಸುವುದು

(೯) ತಾಲ್ಲೂಕು ಮಟ್ಟದ ಕೆ.ಡಿ.ಪಿ. ಸಬೆ , ತ್ರೈಮಾಸಿಕಾ ಭ್ಯಾಂಕರ್ ಸಬೆ ಹಾಗೂ ಗ್ರಾಮಸಬೆಗಳಿಗೆ ಹಾಜರಾಗುವುದು

(೧೦) ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಉದ್ಯಮಶೀಲತಾ ಪ್ರೇರಣಾ ಶಬಿರಗಳನ್ನು ನಡೆಸಲು ನೆರವಾಗುವುದು

(೧೧) ಕೈಗಾರಿಕಾ ವಿವಿದೋದ್ದೆಶ ಸಹಕಾರಿ ಸಂಘಗಳಿಗೆ ಸಧಸ್ಯರಾಗಲು ಕುಶಲಕರ್ಮಿಗಳನ್ನು ಉತ್ತೇಜಿಸುವುದು ಮತ್ತು ಕೈಗಾರಿಕಾ ಸಹಕಾರ ಸಂಘಗಳಿಂದ ದೊರಕುವ ಸೌಲಭ್ಯದ ಬಗ್ಗೆ ಮಾಹಿತಿ ನೀಡುವುದು

(೧೨) ತಾಲೂಕು ಮಟ್ಟದಲ್ಲಿ ಕೈಗಾರಿಕೆ ಗಳಗಳಿಗೆ ಸಂಬಂದಿಸಿದಂತೆ ಅಂಕಿ ಅಂಶಗಳ ಮಾಹಿತಿ ನಿರ್ವಹಣೆ

(೧೩) ಜಂಟನಿರ್ದೆಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಉಪನಿರ್ದೇಶಕರು (ಖಾಗ್ರಾ) ಇವರು ವಹಿಸುವ ಇತರೆ ಕೆಲಸಗಳ ನಿರ್ವಹಣೆ

---

## ಕೇಂದ್ರ ಸ್ಥಾನದ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾದಿಕಾರಿ ನಿರ್ವಹಿಸುವ ಕರ್ತವ್ಯಗಳು

ಕೇಂದ್ರ ಸ್ಥಾನದ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾದಿಕಾರಿಯವರು , ಉಪನಿರ್ದೇಶಕರು (ಖಾಗ್ರಾ) ರವರ 'ಕಚೇರಿಯಲ್ಲಿ ಇದ್ದು ಕರ್ತವ್ಯ ನಿರ್ವಹಿಸುವುದರಿಂದ, ತಾಲ್ಲೂಕು ಕೈಗಾರಿಕಾ ವಿಸ್ತರಣಾದಿಕಾರಿಗಳಿಗೆ ನಿಗದಿಪಡಿಸಿದ ಕರ್ತವ್ಯಗಳನ್ನು ನಿರ್ವಹಿಸುವುದರ ಜೊತೆಗೆ, ಈ ಕೆಳಗಂಡ ಕರ್ತವ್ಯಗಳನ್ನು ಸಹ ನಿರ್ವಹಿಸುವರು

(೧) ಬೀಜದನ ಸಾಲದ ಕಡತಗಳ ನಿರ್ವಹಣೆ

(೨) ಜಿಲ್ಲಾ ವಲಯ ಯೋಜನೆಯಡಿ ಕಾರ್ಯಗತಗೊಳಸುವ ವಿವಿದ ಯೋಜನೆಗಳ ಪ್ರಗತಿ ವರದಿ ಸಿದ್ದಪಡಿಸುವುದು

(೩) ಜಿಲ್ಲಾ ಪಂಚಾಯತಿಯ ವಿವಿದ ಸ್ಥಾಯಿಸಮಿತಿಗಳ ಕಡತ ನಿರ್ವಹಣೆ

,

**4[1][ಬಿ][3]:_** ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ, ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ , ವಿಷಯಕ್ಕೆ ಸಂಬಂದಿಸಿದಂತೆ ರಚಿತವಾದ ನೀತಿ ನಿಯಮಾವಳಿಗಳು ಮತ್ತು ಸಂಬಂದಿಸಿದ ಮಾರ್ಗ ಸೂಚಿ ಆದರಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು, ಕಾಲಕಾಲಕ್ಕೆ ಸರ್ಕಾರ ಹೊರಡಿಸಿದ ಆದೇಶಗಳು ಮತ್ತು

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶನಾಲಯ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತಿ ಚಿಕ್ಕಮಗಳುರು ಇವರು ಕಾಲಕಾಲಕಕೆ ಹೊರಡಿಸುವ ಸುತ್ತೋಲೆಯ ಸೂಚನೆಗಳನ್ನು ಆದರಿಸಿತೀರ್ಮಾನ ತೆಗೆದುಕೊಳ್ಳಲಾಗುವುದು

**4[1][ಬಿ][4]:_** ಕಾರ್ಯಗಳ ನಿರ್ವಹಣೆಗೆ ವಿಶೇಷವಾಗಿ ವಿವಿಧ ಯೋಜನೆಗಳ ಅನುಷ್ಠಾನಕ್ಕೆ , ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶನಾಲಯದಿಂದ ರೂಪಿತವಾದ ಮಾರ್ಗ ಸೂಚಿ ಆದರಿಸಿ ಕ್ರಿಯಾ ಯೋಜನೆ ಸಿದ್ದ ಪಡಿಸಲಾಗುತ್ತದೆ. ಆಡಳಿತಾತ್ಮಕ ವಿಷಯಗಳಿಗೆ ಸಂಬಂದಿಸಿದಂತೆ ಕರ್ನಾಟಕ ನಾಗರಿಕ ನಿಯಮಾವಳಿಗಳನ್ನು ಪಾಲಿಸಲಾಗುವುದು. ಮತ್ತು ಉಳಿದಂತೆ , ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶನಾಲಯ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತಿ ಚಿಕ್ಕಮಗಳುರು ಇವರು ನಿರ್ದಿಷ್ಟವಾಗಿ ಸುತ್ತೋಲೆಯ ಮೂಲಕ ನೀಡುವ ಸೂಚನೆಗಳನ್ನು ಆದರಿಸಿ ಕಾರ್ಯ ನಿರ್ವಹಿಸಲಾಗುವುದು.

**4[1][ಬಿ][5]:-** ಕರ್ನಾಟಕ ನಾಗರಿಕ ಸೇವಾನಿಯಮಾವಳಿಗಳು, ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಚೇದಗಳು, ಸಾದಿಲ್ವಾರು ವೆಚ್ಚ ಕೈಪಿಡಿ ಮತ್ತು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ನಿರ್ದೇಶನಾಲಯದಿಂದ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತಿ ಚಿಕ್ಕಮಗಳೂರುಇವರು ಸುತ್ತೋಲೆ ಮೂಲಕ ನೀಡುವ ಸೂಚನೆಗಳು

**4[1][ಬಿ][6]:-**ಈ ಕಛೇರಿಯು ಈ,ಕೆಳಕಂಡ ದಸ್ತಾವೇಜುಗಳನ್ನು ಪರಿಶೀಲಿಸಿ ಕಾರ್ಯ ನಿರ್ವಹಿಸುತ್ತದೆ.

1. ಕರ್ನಾಟಕ ನಾಗರಿಕ ಸೇವಾನಿಯಮಾವಳಿ ಪುಸ್ತಕ
2. ಕರ್ನಾಟಕ ಆರ್ಥಿಕ ಸಂಹಿತೆ ಮುಸ್ತಕ 1958
3. M.C.E ಪುಸ್ತಕ
4. ಯೋಜನೆಗಳ ಅನುಷ್ಠಾನಕ್ಕೆ ಸಂಬಂದಿಸಿದಂತೆ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ನಿರ್ದೇಶನಾಲಯದಿಂದ ನೀಡಲಾಗಿರುವ ಮಾರ್ಗ ಸೂಚಿ
5. ಕಾಲಕಾಲಕ್ಕೆ ಸರ್ಕಾರ ಹೊರಡಿಸಿರುವ ಆದೇಶಗಳು, ಉದಾ:- ಸರ್ಕಾರಿ ಆದೇಶ ಸಂ FD7srp/2012 Dt:- 21/4/2012.[ ವೇತನ ಪರಿಷ್ಕರಣೆ}

   Fd12/srp/2012, d:- ಭತ್ಯೆಗಳಿಗೆ ಸಂಬಂದಿಸಿದ ಆದೇಶ

   ಸರ್ಕಾರಿ ಆದೇಶ ಸಂಖ್ಯೆ ಸಿ.ಆಸುಈ 96 ಶೀವಾನಿ2012 ದಿನಾಂಕ 23-8-2012 (ಸರ್ಕಾರಿ ಅದಿಕೃತ ಕೆಲಸ ಗಳಿಗೆ ವಾಹನವನ್ನು ಬಾಡಿಗೆ ಆದಾರದ ಮೇಲೆ ಪಡೆಯುವ ಬಗ್ಗೆ

   FD TFP 2001 ದಿನಾಂಕ2-2-2001[ಜನರಲ್ ಡೆಲಿಗೇಷನ್ ಆಫ್ ಕಾಮನ್ ಪ್ಯನ್ಯಾನ್ಸಿಯಲ್ ಪವರ್ಸ]

**4(1)(ಬಿ)(7) :-**

ಈಕಚೇರಿಯು ಜಿಲ್ಲಾ ಪಂಚಾಯತಿಯ ಆಡಳಿತ ನಿಯಂತ್ರಣಕ್ಕೊಳಪಟ್ಟು ಕೆಲಸ ನಿರ್ವಹಿಸುತ್ತದೆ.ಜಿಲ್ಲಾ ಪಂಚಾಯತಿಯಲ್ಲಿ ಜನ ಪ್ರತಿನಿಧಿಗಳು ಅಧ್ಯಕ್ಷರಾಗಿರುತ್ತಾರೆ. ಅಲ್ಲಿ ಕೃಷಿ ಕೈಗಾರಿಕಾ ಸ್ಥಾಯಿ ಸಮಿತಿ , ಹಣಕಾಸು ಮತ್ತು ಯೋಜನಾ ಸಮಿತಿ, ಸಾಮಾನ್ಯ ಸ್ಥಾಯಿ ಸಮಿತಿ , ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮುಂತಾದ ಉಪ ಸಮಿತಿಗಳಿದ್ದು ಸದರಿ ಸಮಿತಿಗಳಲ್ಲಿ ಆಯ್ದ ಜಿ,ಪಂ ಸದಸ್ಯರು ಸದಸ್ಯರಾಗಿರುತ್ತಾರೆ.

ಈ ಕಛೇರಿಯು ಅನುಷ್ಠಾನಗೊಳಿಸುವ ವಿವಿಧ ಯೋಜನೆ/ ಕಾರ್ಯಕ್ರಮಗಳನ್ನು ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗುತ್ತದೆ. ನಂತರ ಸಾಮಾನ್ಯ ಸಭೆಯಲ್ಲಿ , ಕೃಷಿ ಮತ್ತು ಕೈಗಾರಿಕಾ ಸ್ಥಾಯಿಸಮಿತಿಯ ನಿರ್ಣಯ ಅಂಗೀಕಾರವಾಗಬೇಕಾಗುತ್ತದೆ.ಈ ಸಭೆಯ ನಡವಳಿಗಳು ಜಿ.ಪಂ. ಸದಸ್ಯರಿಗೆ ದೊರೆಯುತ್ತವೆ.

**4(1)(ಬಿ)(8)** ;- ಜಿಲ್ಲಾ ಪಂಚಾಯತಿ ಸಭೆಯು ಸಾರ್ವಜನಿಕರಿಗೆ ಮುಕ್ತವಾಗಿರುವುದಿಲ್ಲ, ಸಂಬಂದಿಸಿದ ಜಿ,ಪಂ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಬಹುದಾಗಿರುತ್ತದೆ.

**4(1)(ಬಿ)(9)** :- ಈ ಕಛೇರಿಯಲ್ಲಿ ಈ ಕೆಳಕಂಡ ವಿವರದನ್ವಯ ಮಂಜೂರಾದ ಹುದ್ದೆಗಳು ಮತ್ತು ಖಾಲಿ ಹುದ್ದೆಗಳು ಇದ್ದು ಕರ್ತವ್ಯ ನಿರ್ವಹಿಸಲಾಗುತ್ತಿದೆ.

**ಸೆಕ್ಷನ್ 4(1)(ಬಿ)(ix) ಪ್ರಕಾರ ಅಧಿಕಾರಿಗಳ ಮತು ನೌಕರರ ವಿವರಗಳು:**

ಇಲಾಖೆ: ಗ್ರಾಮೀಣಕೈಗಾರಿಕೆ, ಜಿಲ್ಲಾಪಂಚಾಯಿತಿ, ಚಿಕ್ಕಮಗಳೂರು.

| ಕ್ರ. ಸಂ. | ಪದನಾಮ | ವೇತನಶ್ರೇಣಿ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಇರುವ ಹುದ್ದೆಗಳು |
|---|---|---|---|---|---|
| 1 | 2 | 3 | 4 | 5 | 6 |
| | **ಉಪ ನಿರ್ದೇಶಕರು(ಖಾ.ಗ್ರಾ)ರವರ ಕಛೇರಿ** | | | | |
| 1 | ಉಪನಿರ್ದೇಶಕರು(ಖಾ.ಗ್ರಾ.) | 36300-53850 | 1 | 1 | 0 |
| 2 | ತಾಲೂಕು ಕೈಗಾರಿಕಾ ವಿಸ್ತರಣಾಧಿಕಾರಿಗಳು | 17650-32000 | 6 | 4 | 2 |
| 3 | ಪ್ರಥಮ ದರ್ಜೆ ಸಹಾಯಕರು | 14550-26700 | 1 | 1 | 0 |

**ಸೆಕ್ಷನ್ 4(1)(ಬ)(10) ;- ಈ ಕಛೇರಿಯಲ್ಲಿ ಈ ಕೆಳಕಂಡ ಅಧಿಕಾರಿ ಮತ್ತು ನೌಕರರು ದಿ:- 01/09/2012 ರಂತೆ ಈ ಕೆಳಕಂಡ ವಿವರದನ್ವಯ ಮಾಸಿಕ ವೇತನ ಪಡೆಯುತ್ತಿದ್ದಾರೆ.**

| ಕ್ರ.ಸಂ | ಅಧಿಕಾರಿ/ನೌಕರರ ಹೆಸರು ಶ್ರೀಯುತ/ ಶ್ರೀಮತಿ | ಪದನಾಮ | ವೇತನ |
|---|---|---|---|
| 1 | ಶ್ರೀ ಬಿ.ಪಿ. ಶಿವಮೂರ್ತಿ | ಉಪನಿರ್ದೇಶಕರು(ಖಾ.ಗ್ರಾ) | 41,910-00 |
| 2 | ಶ್ರೀ .ಕೆ.ಎಸ್. ರವಿ ಪ್ರಸಾದ್ | ಕೈಗಾರಿಕಾ ವಿಸ್ತರಣಾಧಿಕಾರಿ | 30,365-00 |
| 3 | ಶ್ರೀ ಎನ್. ಚಂದ್ರಶೇಖರ್ | ಕೈಗಾರಿಕಾ ವಿಸ್ತರಣಾಧಿಕಾರಿ | 29,418-00 |
| 4 | ಶ್ರೀ .ದೊರೈರಾಜ್ . | ಕೈಗಾರಿಕಾ ವಿಸ್ತರಣಾಧಿಕಾರಿ | 22,260-00 |
| 5 | ಶ್ರೀ.ವೀರೇಶ್ ನಾಯ್ಕ್ | ಕೈಗಾರಿಕಾ ವಿಸ್ತರಣಾಧಿಕಾರಿ | 22,260-00 |
| 6 | ಶ್ರೀ ಎಂ.ಭೀಮಾನಾಯ್ಕ್ | ಪ್ರಥಮ ದರ್ಜೆ ಸಹಾಯಕರು | 24,020-00 |

**ಸೆಕ್ಷನ್ 4(1)(ಬಿ)(11) ಪ್ರಕಾರ ಯೋಜನೆಗಳ ವಿವರ ಮತ್ತು ಪ್ರಸ್ಥಾಪಿತ ಖರ್ಚು ಬಿಡುಗಡೆ ವಿವರ[2012-13 ನೇ ಸಾಲು] ಆಗಷ್ಟ್ -2012 ರಂತ್ಯಕ್ಕೆ, ರೂ ಲಕ್ಷಗಳಲ್ಲಿ**

| ಕ್ರ. ಸಂ | ಯೋಜನೆ | ಪ್ರಾರಂಭ ಶಿಲ್ಕು | 2012-13ನೇ ಸಾಲಿನ ಅಂದಾಜು ಅಯವ್ಯಯ (ರಾಜ್ಯ+ಕೇಂದ್ರ | ಸರ್ಕಾರ ದಿಂದ ಬಿಡುಗಡೆಯಾದ ಅನುದಾನ (31/08/2012) | ಲಭ್ಯವಿರುವ ಒಟ್ಟು ಅನುದಾನ (3+5) | ಜಿಲ್ಲಾ ಪಂಚಾಯಿತಿ ಯಿಂದ ಬಿಡುಗಡೆ ಯಾದ ಅನುದಾನ |
|---|---|---|---|---|---|---|
| 1 | ಗ್ರಾಮೀಣ ಕುಶಲ ಕರ್ಮಿ ಯೋಜನೆ | 0.00 | 8.00 | 4.00 | 4.00 | 4.00 |
| 2 | ವಿಚಾರ ಗೋಷ್ಟಿ ವಸ್ತು ಪ್ರದರ್ಶನ | 0.00 | 1.50 | 0.74 | 0.74 | 0.74 |
| 3 | ಕುಶಲ ಕರ್ಮಿಗಳಿಗೆ ಬಡ್ಡಿ ಸಹಾಯ ಧನ | 0.00 | 5.00 | 2.510 | 2.510 | 2.510 |
| 4 | ವೃತ್ತಿಪರ ಕುಶಲಕರ್ಮಿ ಗಳಿಗೆ ಸುಧಾರಿತ | 0.00 | 5.50 | 2.75 | 2.75 | 2.75 |

| | | | | | | |
|---|---|---|---|---|---|---|
| | ಉಪಕರಣ ವಿತರಣೆ | | | | | |
| 5 | ವಿಶೇಷ ಘಟಕ ಯೋಜನೆ | 0.00 | 5.00 | 2.17 | 2.17 | 2.17 |
| 6 | ಗಿರಿಜನ ಉಪಯೋಜನೆ | 0.00 | 1.75 | 0.97 | 0.97 | 0.97 |

**ಸೆಕ್ಷನ್ 4(1)(ಬಿ)(12] :-** ಮೇಲ್ಕಂಡ ಯೋಜನೆಗಳನ್ನೂ ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಪ್ರಕ್ರಿಯೆ ಚಾಲನೆಯಲ್ಲಿದ್ದು ತರಬೇತಿಗೆ ಆಯ್ಕೆ ಮಾಡಲಾದ ಅಭ್ಯರ್ಥಿಗಳ ಪಟ್ಟಿಯನ್ನು ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಅನುಮೋದನೆಗೆ ಸಲ್ಲಿಸಲಾಗಿದ್ದು ಅನುಮೋದನೆಯಾದ ಬಗ್ಗೆ ನಡವಳಿ ಸ್ವೀಕೃತವಾಗಬೇಕಿದೆ.

ಬಡ್ಡಿಸಹಾಯಧನ ಯೋಜನೆಯಡಿ 71 ಫಲಾನುಭವಿಗಳಿಗೆ ರೂ 2,20,057-00 ಗಳ ಬಡ್ಡಿ ಸಹಾಯಧನ ನೀಡಲು ಜಿ.ಪಂ ಆಡಳಿತಾತ್ಮಕ ಅನುಮೋದನೆ ಕೋರಿ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಅನುಮೋದನೆಗೆ ಸಲ್ಲಿಸಲಾಗಿದ್ದು ಅನುಮೋದನೆಯಾದ ಬಗ್ಗೆ ನಡವಳಿ ಸ್ವೀಕೃತವಾಗಬೇಕಿದೆ.

ವಿಚಾರ ಸಂಕಿರಣ , ವಸ್ತು ಪ್ರದರ್ಶನ ಕಾರ್ಯಕ್ರಮ ಅನುಷ್ಠಾನ ಗೊಳಿಸಲು ಅನುಮೋದನೆ ಕೋರಿ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಅನುಮೋದನೆಗೆ ಸಲ್ಲಿಸಲಾಗಿದ್ದು ಅನುಮೋದನೆಯಾದ ಬಗ್ಗೆ ನಡವಳಿ ಸ್ವೀಕೃತವಾಗಬೇಕಿದೆ.

ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಯಡಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಚಾಲನೆಯಲ್ಲಿದೆ.

**ಸೆಕ್ಷನ್ 4(1)(ಬಿ)(13]:-** ಈ ಕಛೇರಿಯಿಂದ ಯಾವುದೇ ಅಧಿಕಾರ ಪತ್ರ, ಅನುಮತಿ ಪತ್ರ ನೀಡುತ್ತಿಲ್ಲ , **ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯಡಿ** ತರಬೇತಿಗೆ ಆಯ್ಕೆ ಯಾದ ಅಭ್ಯರ್ಥಿಗಳಿಗೆ ಮಾಹೆಯಾನ 200-00 ಶಿಷ್ಯವೇತನ ನೀಡಲಾಗುತ್ತದೆ. 6 ತಿಂಗಳ ತರಬೇತಿ ನಂತರ ಅಭ್ಯರ್ಥಿ ಯೊಬ್ಬರಿಗೆ ಗರಿಷ್ಟ 3000-00 ರೂ

ಗಳ ಸಹಾಯಧನದೊಂದಿಗೆ ಸುಧಾರಿತ ಉಪಕರಣ ನೀಡಲಾಗುವುದು. ತರಬೇತಿನೀಡುವ ತರಬೇತಿ ಕೇಂದ್ರದವರಿಗೆ ಅಭ್ಯರ್ಥಿ ಯೊಬ್ಬರಿಗೆ ತರಬೇತಿ ನೀಡಿದುದಕ್ಕೆ ಮಾಹೆಯಾನ 50-00 ರೂ ದರದಲ್ಲಿ ಸಂಭಾವನೆ ನೀಡಲಾಗುವುದು.

**ಬಡ್ಡಿ ಸಹಾಯಧನ** ಯೋಜನೆಯಡಿ ಅರ್ಹ ಕುಶಲಕರ್ಮಿಗಳು ಅಂದರೆ ಮರಗೆಲಸ, ಕಮ್ಮಾರಿಕೆ, ಚರ್ಮಗಾರಿಕೆ, ಕುಂಬಾರಿಕೆ, ಕಸೂತಿ , ಬಿದಿರು. ಬೆತ್ತ ಕರಕುಶಲ, ತೆಂಗಿನನಾರು, ಚಾಪೆ, ಸುಣ್ಣ ಸುಡುವುದು, ಹಗ್ಗ ನೇಯ್ಗೆ ಹಾಗೂ ರೂ.2.00 ಲಕ್ಷ ಗಳ ಬಂಡವಾಳದ ಒಳಗೆ ಅತಿ ಸಣ್ಣ ಕೈಗಾರಿಕೆಗಾಗಿ ಬ್ಯಾಂಕ್ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿಸುತ್ತಿದ್ದರೆ ಬ್ಯಾಂಕ್ ವಿಧಿಸುವ ಬಡ್ಡಿ ಶೇ 7 ರ ಮೇಲೆ ಶೇ 5 ರಷ್ಟು ಬಡ್ಡಿ ಸಹಾಯಧನವನ್ನು ನೀಡಲಾಗುವುದು.

**ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣವಿತರಣೆ:-** ಈ ಯೋಜನೆಯಡಿ 5.50 ಲಕ್ಷರೂ ಅನುದಾನ ವಿರುತ್ತದೆ. ವೃತ್ತಿಪರ ಕಸುಬುದಾರರಿಗೆ ಅವರ ಕಸುಬಿನ ಅಭಿವೃದ್ಧಿಗಾಗಿ ಅಂದರೆ ಮರಗೆಲಸ, ಕಮ್ಮಾರಿಕೆ, ಗಾರೆ, ದೋಬಿ, ಕ್ಷೌರಿಕ, ಮುಂತಾದ ಕಸುಬಿನ ಕುಶಲಕರ್ಮಿಗಳಿಗೆ ತಲಾ 3,000-00 ರೂ ಮೌಲ್ಯದ ಉಚಿತ ಸುಧಾರಿತ ಉಪಕರಣ ನೀಡಲಾಗುವುದು.

**ಸೆಕ್ಷನ್ 4(1)(ಬಿ)(14]:-** ಮೇಲ್ಕಂಡ ಯೋಜನೆಗಳ ಪ್ರಗತಿಯ ಮಾಹಿತಿಯನ್ನು ಗಣಕೀಕರಣಗೊಳಿಸಲಾಗಿದೆ

**ಸೆಕ್ಷನ್ 4(1)(ಬಿ)(15]:-** ಸಾರ್ವಜನಿಕ ಉಪಯೋಗಕ್ಕಾಗಿ ವಾಚನಾಲಯವನ್ನು ಇನ್ನೂ ನಿರ್ವಹಿಸಬೇಕಾಗಿದೆ.

**ಸೆಕ್ಷನ್ 4(1)(ಬಿ)(16) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಪದನಾಮ ಹಾಗು ಇತರೆ ವಿವರಗಳು:**

| ಕ್ರ. ಸಂ | ವಿಭಾಗ | ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಗಳು | ಮೇಲ್ಮನವಿ ಪ್ರಾಧಿಕಾರ |
|---|---|---|---|---|
| 1 | ಉಪನಿರ್ದೇಶಕರು (ಖಾ.ಗ್ರಾ) ರವರ ಕಛೇರಿ.ಗ್ರಾಮೀಣ ಕೈಗಾರಿಕೆಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು | ಬಿ.ಪಿ.ಶಿವಮೂರ್ತಿ ಉಪನಿರ್ದೇಶಕರು (ಖಾ.ಗ್ರಾ) .ಗ್ರಾಮೀಣ ಕೈಗಾರಿಕೆಗಳು, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು | ಕೆ,ಎಸ್,ರವಿಪ್ರಸಾದ್ ಕೈಗಾರಿಕಾ ವಿಸ್ತರಣಾಧಿಕಾರಿ ಚಿಕ್ಕಮಗಳೂರು | ಶಿವಶಂಕರ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್ |

| | | | | |
|---|---|---|---|---|
| | | | | ಚಿಕ್ಕಮಗಳೂರು |

**ಸೆಕ್ಷನ್** 4(1)(ಬಿ)(17);- ದಿನಾಂಕ;-31/08/2012 ರವರೆಗೆ ಪರಿಷ್ಕರಿಸಿದ ಮಾಹಿಯನ್ನುಘೋಷಿಸಲಾಗಿದೆ.

4(1)(ಬಿ) [2] ಸಾರ್ವಜನಿಕರಿಗೆ ಮಾಹಿಯನ್ನು ದೊರಕಿಸಿಕೊಡಲು ಸೂಚನೆಯನುಸಾರ ನಿರಂತರವಾಗಿ ಪ್ರಯತ್ನದಲ್ಲಿರ ಲಾಗುವುದು.

4(1)(ಬಿ)[ 3] ಸಾರ್ವಜನಿಕರಿಗೆ ಸುಲಭವಾಗಿ ಮಾಹಿತಿಯನ್ನು ದೊರಕಿಸುವ ಸಲುವಾಗಿ ಮಾರ್ಗಸೂಚಿಯ ಬ್ರೋಚರನ್ನು ಸಿದ್ಧ ಪಡಿಸಲಾಗಿದೆ. ತಾ/ ಮಟ್ಟದಲ್ಲಿ ಜರುಗುವ ಉದ್ಯಮಶೀಲತಾ ಪ್ರೇರಣಾ ಶಿಬಿರದಲ್ಲಿ ಬ್ರೋಚರನ್ನು ಒದಗಿಸಿ ಮಾಹಿತಿ ನೀಡಲಾಗುವುದು.

4(1)(ಬಿ)[ 4] ಮಾಹಿತಿಯನ್ನು ಸ್ಥಳೀಯ ಭಾಷೆಯಲ್ಲಿ ಅಂದರೆ ಕನ್ನಡದಲ್ಲಿ ಸಿದ್ಧ ಪಡಿಸಿ ನೀಡಲಾಗುತ್ತಿದೆ.